ನಿನ್ನೆ ಬಂದಿತ್ತು.

***

"ಜಯಾ ಅವರ ಚಿಗವ್ವ ಮಲ್ಲವ್ವ ಸಿಕ್ಕರಂತ. ಅವರನ್ನ ಸೊಲ್ಲಾಪುರದಾಗ ಪೊಲೀಸರು ಹುಡುಕಿ ಕೊಟ್ಟಾರ''.

"ಅಲ್ರಿ, ಅವರ ಚಿಗವ್ವ ಮನಿಮಂದಿ ಕೂಡ ಕೊಲ್ಲಾಪುರದ ಮಹಾಲಕ್ಷ್ಮಿ ದರ್ಶನಕ್ಕ ಹೋಗಿದ್ರಲ್ಲ''.

"ಹೌದು, ಅವರೆಲ್ಲಾ ಹೋಗಿದ್ದು ಕೊಲ್ಲಾಪುರದ ಮಹಾಲಕ್ಷ್ಮಿ ದರ್ಶನಕ್ಕ, ಯಾಕಂದ್ರ ಅದು ಈ ಸೀಮ್ಯಾಗ ಬಾಳ ಪ್ರಸಿದ್ಧ ಗುಡಿ. ಶುಕ್ರವಾರ ಪಲ್ಲಕ್ಕಿ ಮೆರವಣಿಗೆ ನಡದರ, ಹಬ್ಬದಾಗ ಗುಡಿ ಉತ್ಸವಮೂರ್ತಿ ಮೆರವಣಿಗಿ ಗುಡ್ಡದಾಗಿರೂ ಟೇಮ್ಲಾಬಾಯಿ ಗುಡಿತನ ಹೋಗ್ತದ. ಅಲ್ಲಿ ಇಬ್ಬರನ್ನೂ ಕೂಡಿಸಿ ಪೂಜಿ ಮಾಡ್ತಾರ. ಮಹಾಲಕ್ಷ್ಮಿ ಕೊಲ್ಹಾಸುರನನ್ನು ಸಂಹಾರ ಮಾಡೂಮುಂದ ಈ ಟೇಮ್ಲಾಬಾಯಿ ಸಹಾಯ ಮಾಡಿದ್ದಳು. ನಂತರ ಮಹಾಲಕ್ಷ್ಮಿ ಅವಳ ಸಹಾಯ ಮರ್ತದ್ದಕ್ಕ ಸೆಟಗೊಂಡ ಗುಡ್ಡಕ್ಕೆ ಹೋಗಿ ಕುಂತಾಳಂತ ಹೇಳ್ತಾರ''.

"ಹೌದೇನ್ರಿ?''

"ಅಷ್ಟ ಅಲ್ಲ, ಅಲ್ಲಿ, ದೇವಿ ಮೂರ್ತಿ ಮ್ಯಾಲ ವರ್ಷಕ್ಕ ಎರಡ ಸಲಾ ಸೂರ್ಯಕಿರಣಗಳು ಬೀಳ್ತಾವ. ಅದಕ್ಕ ಕಿರಣೋತ್ಸವ ಅಂತಾರ. ಸರಿಸುಮಾರು ಜನವರಿ ಕೊನೆಗೆ ಇಲ್ಲ ಫೆಬ್ರುವರಿ ತಿಂಗಳ ಆರಂಭದಲ್ಲಿ ಮತ್ತ ನವೆಂಬರ್ ಎರಡನೇ ವಾರದಾಗ ಸೂರ್ಯ ಕಿರಣಗಳು ದೇವಿ ಪಾದ, ದೇವಿ ಮೂರ್ತಿ ಎದಿ ಮತ್ತ ಪೂರ್ತಿ ಮೂರ್ತಿ ಮ್ಯಾಲ ಬಂದ ಕೂಡ್ತಾವು. ಅದು ಮೂರು ದಿನ ಇದ್ರ, ಒಮ್ಮೊಮ್ಮೆ ಐದ ದಿನ ಇರ್ತದ. ಗೊತ್ತದ ನಿನಗ?''

"ಹೌದೇನ್ರಿ? ಮತ್ತ ಅಲ್ಲಿ ಶಾಹುಮಹಾರಾಜರ ಅರಮನಿ ಐತ್ಯಂತ. ಅಂವಾ ಸಾಮಾಜಿಕ ನ್ಯಾಯಕ್ಕೆ ಬಡಿದಾಡುವ ಭಾಳ ದೊಡ್ಡ ಸಮಾಜ ಸುಧಾರಕ ಆಗಿದ್ದನಂತ?''

"ಹೌದು ನೀ ಹೇಳೂದೂ ಖರೆ ಅದ. ಇತಿಹಾಸದ ಪನ್ನಾಗಳು ತಿಳಿಸೂಹಂಗ, ಇಪ್ಪತ್ತನೇ ಶತಮಾನದ ಮೊದಲ ದಶಕಗಳಲ್ಲಿ ಬ್ರಾಹ್ಮಣರು ಅಲ್ಲದವರಿಗೆ ಶಿಕ್ಷಣ ಮತ್ತು ಸರ್ಕಾರಿ ನೌಕರಿಗಳಲ್ಲಿ ಮೀಸಲಾತಿ ಕೊಡೂದುಕ್ಕ, ಮೈಸೂರು, ಬರೋಡಾ ಮತ್ತ ಕೊಲ್ಲಾಪುರ ಸಂಸ್ಥಾನಗಳ ಅರಸರು ಮುಂದಾಗಿದ್ದರು. ಮೈಸೂರಿನ ಅರಸರು, ಈ ಉದ್ದೇಶದ ಮಿಲ್ಲರ್ ಆಯೋಗದ ವರದಿ ಜಾರಿ ಮಾಡಿದಾಗ, ಅದನ್ನ ವಿರೋಧಿಸಿ ಮೋಕ್ಷಗುಂಡಂ ವಿಶ್ವೇಶ್ವರಯ್ಯ ಅವರು ರಾಜಿನಾಮಿ ಕೊಟ್ಟರಂತ''.

"ರಾಜಿನಾಮಿ ಕೊಟ್ಟಿದ್ದರೂ ಕೊಟ್ಟಿರಬೇಕ ಬಿಡ್ರಿ. ಆದರ, ಮಲ್ಲವ್ವನ್ನ ಕಳಕೊಂಡದ್ದು ಕೊಲ್ಲಾಪುರದಾಗ, ಆದರ ಅವಳು ಸಿಕ್ಕಿದ್ದು ಸೊಲ್ಲಾಪುರದಾಗ ಅಂತೀರಿ''.

"ಮೊದಲ ಕೊಲ್ಲಾಪುರದ ಕತಿ ಮುಗಸ್ತೀನಿ ತಡಿ. ವಿಶ್ವೇಶ್ವರಯ್ಯ ಅವರು, ರಾಜಿನಾಮಿ ಕೊಟ್ಟದ್ದು ಭಾಳ ಮುಖ್ಯ ಸಂಗತಿ ಆಗ್ತದ. ಮೈಸೂರು, ಬರೋಡಾ ಮತ್ತು ಕೊಲ್ಲಾಪುರ ಸಂಸ್ಥಾನಗಳು ಬ್ರಿಟಿಷರಿಗೆ ನಿಷ್ಠರಾಗಿದ್ದರೂ, ಆಧುನಿಕತೆ, ವೈಚಾರಿಕತೆ ಮತ್ತ ದಲಿತ ಶೂದ್ರ ಸಮುದಾಯಗಳಲ್ಲಿ ಸಾಮಾಜಿಕ ಎಚ್ಚರ ಮೂಡಿಸುವಲ್ಲಿ, ಸಮಾಜ ಸುಧಾರಣೆಯೊಳಗ ದೊಡ್ಡ ಕೆಲಸ ಮಾಡ್ಯಾವ ಅನ್ನೂದನ್ನ ಮರಿಬ್ಯಾಡ. ನಮ್ಮ ಅಂಗಡಿಗೆ 'ರಾಜರ್ಷಿ ಶಾಹೂ ಛತ್ರಪತಿ: ಒಬ್ಬ ಸಾಮಾಜಿಕ ಕ್ರಾಂತಿಕಾರಿ ರಾಜ' ಪುಸ್ತಕ ಮಾರಾಟಕ್ಕ ಬಂದಿದ್ವು. ಆವಾಗ ನನಗ ಇದೆಲ್ಲಾ ಗೊತ್ತಾಯಿತ''.

"ಆಯಿತ್ರಿ, ಮಲ್ಲವ್ವ ಕಳಕೊಂಡಿದ್ದು ಕೊಲ್ಲಾಪುರದಾಗ. ಆದರ, ಆಕಿ ಸಿಕ್ಕಿದ್ದು ಸೊಲ್ಲಾಪುರದಾಗ. ಏನ್ ಕತೀರಿ ಇದು?''

"ಹೌದ..., ಕೊಲ್ಲಾಪುರದಾಗ ಕಳಕೊಂಡ ಜಯಾನ ಚಿಗವ್ವ ಸೊಲ್ಲಾಪುರದಾಗ ಸಿಕ್ಕಿದ್ದು. ಸೊಲ್ಲಾಪುರ ಸಿದ್ಧರಾಮನ ಕ್ಷೇತ್ರ ಅದು. ಅಲ್ಲಿ ಮಕರ ಸಂಕ್ರಾಂತಿಗೆ ನಂದಿಧ್ವಜದ ಮೆರವಣಿಗೆ ನಡಿತದ. ಅಲ್ಲಿ ಜಯಾನ ಚಿಗವ್ವ ಸಿಕ್ಕರಂತ. ಅಷ್ಟರ ನಡಬರಕ ಮಲ್ಲವ್ವ ಪಂಢರಪುರಕ್ಕೂ ಹೋಗಿದ್ದಳಂತ''.



"ಅಯ್ಯ ನಮ್ಮವ್ವ, ಎಲ್ಲೆಲ್ಲಿ ಸುತ್ಯಾಡ್ಯಾಳ ಈ ಮಲ್ಲವ್ವ?''

"ಭಕ್ತರ ಟೋಳಿಗಳ ಜೊತಿ ಹೋಗಿಬಿಟ್ಟಾಳ ಅಕಿ. ಹೆಂಗೂ ಜಯಾ ಮನ್ಯಾಗ ಬಯ್ದುಬಿಟ್ಟಿದ್ದ. ಅಕ್ಕ, ಭಾವ ಮಗನ ಮಾತಿಗೆ ಅಡ್ಡ ಏನೂ ಹೇಳಲಿಲ್ಲ. ಮನಿಗೆ ಹೆಂಗ ಹೋಗೂದು ಗೊತ್ತಾಗಿಲ್ಲ. ಮೊದಲ ಮಲ್ಲವ್ವ ಅನಕ್ಷರಸ್ಥೆ, ಹೆಬ್ಬಟ್ಟಿನವಳು. ಆಕಿನರೇ ಏನ ಮಾಡ್ಯಾಳ. ದೇವರ ಕರಿಸಿಕೊಂಡಾನ ಹೋಗಿದ್ದೆ ಅಂತಾಳ ಆಕಿ''.

"ಇಷ್ಟ ವರ್ಷ ಮನ್ಯಾಗಿದ್ದ ಜೀವ ಹೊರಗ ಹೆಂಗ ಇತ್ತೊ ಏನೋ?''

"ಕರೆಯಿಸಿಕೊಂಡಿರೂ ದೇವರು ಎಲ್ಲಾ ನೋಡಕೋತಾನ. ಪ್ರಸಿದ್ಧ ತೀರ್ಥ ಕ್ಷೇತ್ರವಾಗಿರು ಗುಡಿಗಳೊಳಗ ಎರಡ ಹೊತ್ತ ದಾಸೋಹದ ಪ್ರಸಾದ ಸಿಗತಿತ್ತು. ದಾಸೋಹದ ಅಡಗಿಮನ್ಯಾಗ ಅಡಗಿ ಮಾಡೂ, ಗುಡಿ ಅಂಗಳ ಸ್ವಚ್ಛ ಮಾಡೂ ಸೇವಾದ ಕೆಲಸ ಅವಳಿಗೆ ಮನಸ್ಸಿಗೆ ನೆಮ್ಮದಿ ತರ್ತಿತ್ತು ಕಾಣ್ತದ. ಯಾತ್ರಿಗಳು ಭಕ್ತಿಲಿಂದ ದೇವರ ಮ್ಯಾಲ ಭಾರ ಹಾಕಿ ಗುಡಿ ಪ್ರಾಕಾರದಾಗ ಮಲಗತಿದ್ದರು, ಅವರ ಜೊತಿ ಅಲ್ಲೇ ರಾತ್ರಿ ಮಲಗಾಕ ಜಾಗ ಮಾಡಕೋತಿದ್ದಳಂತ''.

"ನಾಳೆ ಮುಂಜಾನಿ ದತ್ತಾತ್ರೇಯ ಗುಡ್ಯಾಗ ಪೂಜಾ ಇಡಿಸ್ಯಾರ ಅಂತ. ಎಲ್ಲಾರನೂ ಕರದಾನ. ಸಂಜಿ ಮುಂದ ಮನಿ ಕಡೆ ಬರ್ತಾನಂತ, ನಮ್ಮ ಗುಡಿ ಮುಂದ ಇರೂ ಸಂತ ಅಂತೋನಪ್ಪರ ಸ್ವರೂಪದ ಮುಂದ ಮೇಣಬತ್ತಿ ಹಚ್ಚೂನು, ಸಾಧ್ಯ ಆದರ ಉಪಕಾರ ಸ್ಮರಣ್ಯಾಗ ಪೂಜಿ ಇಡಸೂನು ಅಂದಾನ. ನವೆಂಬರ ತಿಂಗಳದಾಗ ಕಳದಹೋಗಿದ್ದ ಮಲ್ಲವ್ವ ಚಿಗವ್ವ, ಸೆಪ್ಟೆಂಬರ್ ತಿಂಗಳದಾಗ ಸಿಕ್ಕಾಳ. ಒಂಬತ್ತ ಹತ್ತ ತಿಂಗಳಾಯಿತಲ್ಲ. ಜಯಾ ಮತ್ತು ಅವರ ಮನಿಯವರು ಎಷ್ಟ ಗೋಳಾಡಿದರು. ಅವರ ಸಂಕಟ ನೋಡಾಕ ಆಗತಿರಲಿಲ್ಲ. ಜಯಾ ಅಂತೂ ಚಿಂತಿ ಮಾಡಿ ಮಾಡಿ ಸೋತಿದ್ದ''.

"ಹೌದ ಹೌದ. ಈ ಒಂಬತ್ತ ಹತ್ತ ತಿಂಗಳು... ನಿಮ್ಮ ಚಿಗವ್ವನ ಜೊತಿ ಮಾತ ಬಿಟ್ಟ ಇಪ್ಪತ್ತ ವರ್ಷ ಕಳದದ್ದರ ಮುಂದ ಏನ ಅಲ್ಲ ಬಿಡ. ಹಿರಿಯ ಜೀವ ಇನ್ನೂ ಎಷ್ಟ ದಿನ ಇರ್ತಾರೋ ಗೊತ್ತಿಲ್ಲ. ಇರೂವಷ್ಟ ದಿನ ಸಮಾಧಾನ, ಸಂತೋಷದಿಂದ ಕಳಿಬೇಕಲ್ಲ. ಅದಕ್ಕ ನಾವು ನಮ್ಮ ಕೈಲಾದಷ್ಟ ಸಹಕಾರ ಮಾಡಬೇಕ. ಇಲ್ಲಕಂದ್ರ ದೇವರ ನಮ್ಮನ್ನ ಮೆಚ್ಚಾಂಗಿಲ್ಲ ನೋಡ''.

'ಈ ಮಾತ, ಇವರ ಹೇಳಿದರ?' ನನ್ನ ಕಿವಿ, ನಾನ ನಂಬದಂಗ ಆಗಿತ್ತು.

ಹಿಂದಿನ ರವಿವಾರ ಪ್ರಸಂಗ ಮಾಡೂ ಮುಂದ, ಗುರುಗಳು 'ಸ್ವಸ್ಥ ಜೀವನಕ್ಕ ಮನಸ್ಸೊಳಗಿನ ಕಸ ಹೊರಗ ಹಾಕರಿ' ಅಂತ ವಿವರಿಸಿ ಹೇಳಿದ್ದರು.

'ಮನಸ್ಸ ಸ್ವಚ್ಛ ಇದ್ರ, ಮನಿ ಸ್ವಚ್ಛ ಇರ್ತದ, ಮನಿಗಳು ಸ್ವಚ್ಛ ಇದ್ರ, ಸಮಾಜ ಸ್ವಚ್ಛ ಇರ್ತದ. ಸಮಾಜ ಸ್ವಚ್ಛ ಇದ್ರ, ದೇಶ ಸ್ವಚ್ಛ ಇರ್ತದ. ದೇಶ ಸ್ವಚ್ಛ ಇದ್ರ, ಜಗತ್ತ ಸ್ವಚ್ಛ ಇರ್ತದ. ಹಿಂಗ ಮನಸ್ಸ್ ಸ್ವಸ್ಥ ಇದ್ರ ಮನಿ ಸ್ವಸ್ಥ ಇರ್ತದ, ಮನಿಗಳು ಸ್ವಸ್ಥ ಇದ್ರ, ಸಮಾಜ ಸ್ವಸ್ಥ ಇರ್ತದ. ಸಮಾಜ ಸ್ವಸ್ಥ ಇದ, ದೇಶ ಸ್ವಸ್ಥ ಇರ್ತದ. ದೇಶ ಸ್ವಸ್ಥ ಇದ್ರ, ಜಗತ್ತ ಸ್ವಸ್ಥ ಇರ್ತದ'.

ಪ್ರಸಂಗದ ಮಾತುಗಳು ನೆನಪಾದವು.

ಅಷ್ಟ ಹೇಳೂದರಾಗ ಹೊರಗ ಮನಿ ಮುಂದಿನ ರಸ್ತಾದಾಗ ಮನೆಮನೆಯಿಂದ ಕಸ ಒಯ್ಯಲು ಪಂಚಾಯ್ತಿ ಗಾಡಿ ಬಂದಿತ್ತು.

ಆಲಾ ಆಲಾರೆ, ಕಚಡಾವಾಲಾ ಆಲಾ...

ಗಾಡಿ ವಾಲಾ ಆಲಾ

ಆಲಾ ಆಲಾರೆ ಕಚಡಾವಾಲಾ ಆಲಾ,

ಘರಕಾ ಕಚಡಾ ನಿಕಾಲ

ರಾಗದಲ್ಲಿ ಹಾಡುತ್ತಿದ್ದ ರಿಕಾರ್ಡ್ ಮಾಡಿ ಹಾಕಿದ ಹಾಡು ಕಿವಿ ಪರದಾ ಹರಿಯುವಂಗ ಹೊಡಕೊಳ್ಳತ್ತಿತ್ತು.

ಪ್ರತಿಕ್ರಿಯಿಸಿ: feedback@sudha.co.in